5C.R.P.67

Form No.4 (Civil)
Deposition Sheets
(R.P.No.57)

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ
ಎಸ್.ಸಿ. ನಂ. 73/2022

ದಿನಾಂಕ ಃ 02.07.2025 ರಂದು ಪ್ರಮಾಣ ವಚನ ಬೋದಿಸಲಾಗಿದೆ.

ಸಿ. ಡಬ್ಲ್ಯೂ: 7 ಪಿ. ಡಬ್ಲ್ಯೂ:8

| | |
|---|---|
| ಸಾಕ್ಷಿದಾರರ ಹೆಸರು | ನರಸಿಂಹಯ್ಯ |
| ತಂದೆಯ ಹೆಸರು | ದ್ಯಾವರಸಯ್ಯ |
| ವಯಸ್ಸು | 50 ವರ್ಷ |
| ಉದ್ಯೋಗ | ಕೂಲಿ ಕೆಲಸ |
| ವಾಸ | ವಡ್ಡರಹಳ್ಳಿ |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

1. ನ್ಯಾಯಾಲಯದ ಮುಂದೆ ಇರುವ ಆರೋಪಿತರು ಗೊತ್ತು, ಅವರು ನಮ್ಮ ಊರಿನವರಾಗಿರುತ್ತಾರೆ. ನಮ್ಮ ಮನೆಯಿಂದ, ಆರೋಪಿತರ ಮನೆಗೆ 5 - 6 ಕಿಮೀ ದೂರ ಇದೆ. 1 ನೇ ಆರೋಪಿಯು 5–6 ವರುಷಗಳ ಹಿಂದೆ ಕಿರಗಸೂರು ಊರಿನ ಹುಡುಗಿಯನ್ನು ಮದುವೆಯಾಗಿರುತ್ತಾರೆ. ಮದುವೆ ಮಾತುಕತೆಯು, ಹುಡುಗಿಯ ಮನೆಯಲ್ಲಿ ನಡೆದಿತ್ತು. ಸದರಿ ಮದುವೆ ಮಾತುಕತೆಗೆ, ಯಾರೆಲ್ಲ ಹೋಗಿದ್ದರೆಂದು ನನಗೆ ಗೊತ್ತಿಲ್ಲ. ನಾನು ಮದುವೆಗೆ ಮಾತ್ರ ಹೋಗಿದ್ದೆನು. ಸದರಿ ಹುಡುಗಿಯನ್ನು 1 ನೇ ಆರೋಪಿಗೆ ನಾನು ತೋರಿಸಿಲ್ಲ. ಸದರಿ ಮದುವೆಯು, ಬೆಳಕವಾಡಿಯಲ್ಲಿ ಇರುವ ಛತ್ರದಲ್ಲಿ ನಡೆದಿತ್ತು. ಸದರಿ ಮದುವೆಗೆ ಎಷ್ಟು ಖರ್ಚು ಆಗಿದೆ ಎಂದು ನನಗೆ ಗೊತ್ತಿಲ್ಲ. ಹುಡುಗಿ ಮನೆಯವರು, ಸದರಿ ಹುಡುಗಿಗೆ ಚಿನ್ನದ ಆಭರಣಗಳನ್ನು ನೀಡಿರುತ್ತಾರೆ. ಸದರಿ ಆಭರಣಗಳನ್ನು ಮದುವೆ ಮಾಡುವ ಸಲುವಾಗಿ ನೀಡಿರುತ್ತಾರೆ. ಸದರಿ ಹುಡುಗಿಯ ಹೆಸರು ನನಗೆ ಸರಿಯಾಗಿ ತಿಳಿದಿಲ್ಲ. ಸದರಿ ಹುಡುಗಿ ತೀರಿಕೊಂಡಿರುತ್ತಾಳೆ.

2. ಸದರಿ ಹುಡುಗಿ ತೀರಿಕೊಳ್ಳುವ ಮೊದಲು ವಡ್ಡರಹಳ್ಳಿಯಲ್ಲಿ ಆರೋಪಿತರೊಂದಿಗೆ ವಾಸವಿದ್ದಳು. ಅವರ ಸಂಬಂಧವು ಚೆನ್ನಾಗಿತ್ತು. ಸದರಿ ಹುಡುಗಿಯು, ಆಕೆಯ ಮನೆಯಲ್ಲಿ ನೇಣು ಹಾಕಿಕೊಂಡು ತೀರಿಕೊಂಡಿದ್ದಳು, ಆಕೆಯ ಗಂಡ ಮನೆಗೆ ಬರುವಷ್ಟರಲ್ಲಿ ಆಕೆಯು

ನೇಣು ಹಾಕಿಕೊಂಡಿದ್ದಳು. ನಾನು ಕೂಲಿಗೆ ಹೋಗಿದ್ದೆನು, ಮಧ್ಯಾಹ್ನ 12.00 ಗಂಟೆಗೆ, ಆಕೆ ತೀರಿಕೊಂಡ ವಿಚಾರ ಪಕ್ಕದ ಊರಿನವರಿಂದ ನನಗೆ ಗೊತ್ತಾಗಿರುತ್ತದೆ. ಸದರಿ ಹುಡುಗಿ ಯಾವ ಕಾರಣದಿಂದ ಆತ್ಮಹತ್ಯೆಮಾಡಿಕೊಂಡಳೆಂದು ನಾನು ವಿಚಾರಿಸಿಲ್ಲ. ಪೊಲೀಸರು ನನ್ನ ಹೇಳಿಕೆಯನ್ನು ಪಡೆದಿಲ್ಲ. 1 ನೇ ಆರೋಪಿಯ ಹೆಂಡತಿ ಮಧುಮಾಲಿನಿ ಯಾವ ಕಾರಣದಿಂದ ಆತ್ಮಹತ್ಯೆಮಾಡಿಕೊಂಡಳೆಂದು ಈವತ್ತಿನ ವರೆಗೆ ನನಗೆ ತಿಳಿದು ಬಂದಿಲ್ಲ.

3. ಸದರಿ 1 ನೇ ಆರೋಪಿಯ ಹೆಂಡತಿ ಮೃತ ಪಟ್ಟ ವಿಚಾರದಲ್ಲಿ, ಈ ಪ್ರಕರಣ ನಡೆಯುತ್ತಿದೆ.

(ಈ ಹಂತದಲ್ಲಿ ಮಾನ್ಯ ಸಾ.ಅ ರವರು ಸಾಕ್ಷಿ ಹೇಳಿಕೆಗೆ ವಿರುದ್ಧವಾಗಿ ಸಾಕ್ಷಿ ನುಡಿದಿದ್ದಾರೆ ಎಂದು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಗಿದೆ).

**ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

4. ನಾನು ಊರಿನಲ್ಲಿ ಯಜಮಾನಿಕೆಯನ್ನು ಮಾಡುವುದಿಲ್ಲ. ಗ್ರಾಮದಲ್ಲಿ ಯಾವುದೇ ವಿಚಾರವಿದ್ದರೂ ಸಹ ಮೊದಲಿಗೆ ನನ್ನ ಗಮನಕ್ಕೆ ತರುತ್ತಾರೆ ಎಂದರೆ ಸರಿಯಲ್ಲ. 2 ನೇ ಆರೋಪಿತನು, 1 ನೇ ಆರೋಪಿಗೆ ಮದುವೆ ಮಾಡಬೇಕೆಂದು ಹುಡುಗಿಯನ್ನು ತೋರಿಸಿ ಎಂದು ನನ್ನ ಬಳಿ ಹೇಳಿದ್ದರು ಎಂದರೆ ಸರಿಯಲ್ಲ. ನಾನು ಕಿರಗಸೂರು ಗ್ರಾಮದ ಶೇಖರ್ ರವರ ಮಗಳನ್ನು ಹೇಳಿದ್ದೇನೆ ಎಂದರೆ ಸರಿಯಲ್ಲ. ಮದುವೆ ಮಾತುಕತೆಗೆ, ಕಿರಗಸೂರು ಗ್ರಾಮಕ್ಕೆ ಹುಡುಗನ ಕಡೆಯವರಾಗಿ ನಾನೂ ಸಹ ಹೋಗಿದ್ದೆನು ಎಂದರೆ ಸರಿಯಲ್ಲ. ಸದರಿ ಮಾತುಕತೆಯಲ್ಲಿ, 2 ನೇ ಆರೋಪಿಯು, ವರದಕ್ಷಿಣೆಯಾಗಿ, 50 ಗ್ರಾಂ ಚಿನ್ನದ ಕುತ್ತಿಗೆ ಚೈನು, ಒಂದು ಉಂಗುರ, ರೂ.1 ಲಕ್ಷ ಹಣ, ಹುಡುಗಿಗೆ ಒಡವೆ ಹಾಗೂ ಛತ್ರದಲ್ಲಿ ಮದುವೆ ಮಾಡಿಕೊಡುವಂತೆ ಕೇಳಿದ್ದರು ಎಂದರೆ ಸರಿಯಲ್ಲ. ಒಡವೆಗಳನ್ನು ಕೊಡುತ್ತೆವೆ , ಹಣವನ್ನು ನಂತರದಲ್ಲಿ ಕೊಡುತ್ತೇವೆ ಎಂದು ಶೇಖರ್ ರವರು ಹೇಳಿದ್ದು, ಅದಕ್ಕೆ ಆರೋಪಿತರು ಒಪ್ಪಿಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ನನ್ನನ್ನೂ ಸಹ ಮದುವೆ ಮಂಟಪದಲ್ಲಿ ಕರೆದುಕೊಂಡು, ಮದುವೆ ಮಾತುಕತೆಯಂತೆ ಹುಡುಗನಿಗೆ 20 ಗ್ರಾಂ ಚಿನ್ನದ ಚೈನು ಮತ್ತು ಉಂಗುರವರನ್ನು ಕೊಡುತ್ತಿದ್ದೇವೆಂದು ಸದರಿ ಶೇಖರ್ ಮತ್ತು ಆತನ ಹೆಂಡತಿ ನನ್ನನ್ನು ಕರೆದುಕೊಂಡು ಹೋಗಿ ನಮ್ಮ ಸಮಕ್ಷಮದಲ್ಲಿ ಒಡವೆಗಳನ್ನು ಆರೋಪಿತರಿಗೆ ನೀಡಿದ್ದರು ಎಂದರೆ ಸರಿಯಲ್ಲ. ಸದರಿ ಮದುವೆ ಮಂಟಪದಲ್ಲಿ ಮಾತುಕತೆಯಾದಂತೆ

ಜಯಮ್ಮ ರವರು ಹುಡುಗಿಗೆ ಒಂದು ಜೊತೆ ಯಾಂಗಿಗ್ಸ ಮತ್ತು ಕೋಮಲರವರು ಒಂದು ಜೊತೆ ಗೆಜ್ಜೆ ಮಾಟಿಯನ್ನು ಸಹ ಕೊಟ್ಟಿದ್ದರು ಎಂದರೆ ಗೊತ್ತಿಲ್ಲ. 4 ವರುಷಗಳ ಕಾಲ, 1 ನೇ ಆರೋಪಿ ಹಾಗೂ ಆತನ ಹೆಂಡತಿ, ಚೆನ್ನಾಗಿದ್ದು, ನಂತರ 1 ನೇ ಆರೋಪಿಯು ನನ್ನ ಬಳಿ ಬಂದು, ಆತನ ಹೆಂಡತಿ, 2 ನೇ ಆರೋಪಿಗೆ ಊಟ ತಿಂಡಿ ಮಾಡಿಕೊಡುವುದಿಲ್ಲ, ಚೆನ್ನಾಗಿ ನೋಡಿಕೊಳ್ಳುವುದಿಲ್ಲವೆಂದು ಹೇಳಿದ್ದನು ಆಗ ನಾನು ನಿನ್ನ ಹೆಂಡತಿಗೆ ಹೇಳಿ ಸರಿ ಮಾಡಿಕೋ ಎಂದು ಹೇಳಿದ್ದೆ ಎಂದರೆ ಸರಿಯಲ್ಲ. ನಂತರ ಶೇಖರ್ ರವರು, ಮಳವಳ್ಳಿಯಲ್ಲಿ ಸಿಕ್ಕಿ, ವರದಕ್ಷಿಣೆ ಹಣ ಕೇಳುವಾಗ, 1 ಲಕ್ಷ ಹಣ ಕೇಳಿದ್ದೆ, ನಿಮ್ಮಪ್ಪನ ಮನೆಯವರು ಕೊಡಲು ಒಪ್ಪಿಕೊಳ್ಳದೇ ನಂತರದಲ್ಲಿ ಕೊಡುತ್ತೇನೆ ಎಂದು ಹೇಳಿದ್ದರು, ತೆಗೆದುಕೊಂಡು ಬಾ, ಇನ್ನಷ್ಟು ಚಿನ್ನದ ಒಡವೆಗಳನ್ನು ಮಾಡಿಸಿಕೊಂಡು ಬಾ ಎಂದು 1 ನೇ ಆರೋಪಿ , ಅವನ ಹೆಂಡತಿಗೆ ಕಿರುಕುಳ ನೀಡಿ ಕಳುಹಿಸಿದ್ದರು ಎಂದರೆ ಸರಿಯಲ್ಲ. ಸದರಿ ಶೇಖರ್ ರವರು, ತಾವು, ಮಧು ಮಾಲಿನಿ ಬಂದಾಗಲ್ಲ ಹಣ ಅಥವಾ ಉಂಗುರವನ್ನು ಮಾಡಿಸಿಕೊಟ್ಟು ಚೆನ್ನಾಗಿರುವಂತೆ ಹೇಳಿ ಕಳುಹಿಸಿದ್ದೆವು ಎಂದು ಹೇಳಿದ್ದರು ಎಂದರೆ ಸರಿಯಲ್ಲ. ಆದರೂ ಸಹ ಆರೋಪಿತರ ಹಣದ ದಾಹ ತೀರದೇ, ಮಧುಮಾಲಿನಿಗೆ, ಹಣ, ಒಡವೆ ಪಡೆದುಕೊಂಡು ಬರುವಂತೆ ಹೊಡೆಯುವುದು, ಬೈಯುವುದು ಮಾಡಿ ಮಾನಸಿಕ, ದೈಹಿಕ ಹಿಂಸೆ ನೀಡುತ್ತಿದ್ದರು ಎಂದು ಶೇಖರ್ ಹೇಳುತ್ತಿದ್ದರು ಎಂದರೆ ಸರಿಯಲ್ಲ. ಈ ಬಗ್ಗೆ ಪಂಚಾಯಿತಿ ಮಾಡುವುದಾದರೆ ನಮ್ಮನ್ನು ಕರೆಯಿರಿ, ಆರೋಪಿತರಿಗೆ ಬುದ್ದಿ ಹೇಳುತ್ತೇವೆ ಎಂದು ನಾನು ಹೇಳಿದ್ದೆನು ಎಂದರೆ ಸರಿಯಲ್ಲ.

5. ಸದರಿ ಶೇಖರ್ ರವರು ಮತ್ತೊಂದು ಬಾರಿ ಮಳಳ್ಳಿಯಲ್ಲಿ ಸಿಕ್ಕಿದಾಗ, ನಿಮ್ಮನ್ನೆಲ್ಲಾ ಕರೆದುಕೊಂಡು ಹೋಗಿ ಆರೋಪಿತರ ಮನೆಯಲ್ಲಿ ನ್ಯಾಯ ಪಂಚಾಯ್ತಿ ಮಾಡಿದರೆ, ಮತ್ತೆ ಅವರು ನನ್ನ ಮಗಳಿಗೆ ಕಿರುಕುಳ ನೀಡಬಹುದೆಂದು ಯೋಚನೆ ಮಾಡಿ ನಾನು ಮತತ್ತು ನನ್ನ ಮಗ ಆರೋಪಿತರ ಮನೆಗೆ 2 - 3 ಬಾರಿ ಹೋಗಿ, ಆರೋಪಿತರಿಗೆ ನೀವು ಕೇಳಿದಷ್ಟು ವರದಕ್ಷಿಣೆಗೆ ಕೊಟ್ಟು ಮದುವೆ ಮಾಡಿಕೊಟ್ಟಿದ್ದಲ್ಲದೇ, ನಡುವೆ ಚಿನ್ನದ ಉಂಗುರ ಮತ್ತು 50 ಸಾವಿರ ರೂ. ವರೆಗೆ ಹಣವನ್ನು ನೀಡಿದ್ದೇವೆ, ಈಗಿದ್ದರೂ ನಮ್ಮ ಮಗಳಿಗೆ ಏಕೆ ತೊಂದರೆ ಕೊಡುತ್ತೀರಿ, ಆಕೆಯನ್ನು ಚೆನ್ನಾಗಿ ನೋಡಿಕೊಳ್ಳುವಂತೆ ತಿಳುವಳಿಕೆ ಹೇಳಿ ಬಂದೆವು ಎಂದು ನನಗೆ ಹೇಳಿದ್ದರು ಎಂದರೆ ಸರಿಯಲ್ಲ. ಸದರಿ ಆರೋಪಿತರು ಮಧುಮಾಲಿನಿಯನ್ನು ಚೆನ್ನಾಜಗಿ ನೊಡಿಕೊಳ್ಳುತ್ತೇವೆ ಎಂದು ಹೇಳುವುದು ಮತ್ತೆ ಹಣ ಒಡವೆ ತೆಗೆದುಕೊಂಡು ಬಾ ಎಂದು ಬೈದು ತೊಂದರೆ ಕೊಡುವುದು ಮತ್ತು ನಿನ್ನ ಮತ್ತು ನಿನ್ನ ಮಕ್ಕಳನ್ನು ಸಾಕಲು 1 ಲಕ್ಷ

ಹಣವನ್ನು ತವರು ಮನೆಯಿಂದ ತರುವಂತೆ ಇಲ್ಲದಿದ್ದರೆ ನಿನ್ನನ್ನು ನೇಣು ಹಾಕುತ್ತೇವೆಂದು ಬೆದರಿಸುತ್ತಿದ್ದಾರೆಂದು ಮಧುಮಾಲಿನಿ ಹೇಳಿಕೊಂಡಂಳೆಂದು ಶೇಖರ್ ನನಗೆ ತಿಳಿಸಿದರು ಎಂದರೆ ಸರಿಯಲ್ಲ. ಆಗ ವಡ್ಡರಹಳ್ಳಿಗೆ ಬಂದು ನಮ್ಮನ್ನು ಕರೆಯಿರಿ, ನಿಮ್ಮ ಎದುರಿನಲ್ಲೆ ಆರೋಪಿತರಿಗೆ ಬುದ್ದಿವಾದ ಹೇಳಿ ಬರುತ್ತೇನೆ ಎಂದು ಹೇಳಿದೆ ಎಂದರೆ ಸರಿಯಲ್ಲ.

6. ದಿಃ 04.10.2020 ರಂದು ಮಧ್ಯಾಹ್ನದ ವೇಳೆಗೆ 1 ನೇ ಆರೋಪಿಯ ಹೆಂಡತಿ ನೇಣು ಹಾಕಿಕೊಂಡಿದ್ದಾಳೆಂದು, ಆಕೆಯನ್ನು 1 ನೇ ಆರೋಪಿ ಮಳವಳ್ಳಿಗೆ ಕರೆದುಕೊಂಡು ಹೋದನೆಂದು ವಿಚಾರ ಗೊತ್ತಾಗಿ ನಾನು ಮಳವಳ್ಳಿ ಸರ್ಕಾರಿ ಆಸ್ಪತ್ರೆ ಗೆ ಹೋದೆನು ಎಂದರೆ ಸಾಕ್ಷಿಯು ಮಧ್ಯಾಹ್ನ 3.00 ಗಂಟೆಯ ನಂತರ ಹೋದೆನು ಎಂದು ನುಡಿಯುತ್ತಾರೆ. ಆಗ ನನಗೆ ಶೇಖರ್ ರವರು ಸಿಕ್ಕಿದ್ದರು ಎಂದರೆ ಸರಿ. ಮಧುಮಾಲಿನಿ ತೀರಿಕೊಳ್ಳುವ ಹಿಂದಿನ 2 ದಿನಗಳಲ್ಲಿ ಫೋನ್ ಮಾಡಿ ಬರುವಂತೆ ಹೇಳಿದ್ದರಿಂದ ತನ್ನ ಹೆಂಡತಿ ಮತ್ತು ತನ್ನ ಕಿರಿಯ ಮಗ ಮಧುಮಾಲಿನಿಯ ಮನೆಗೆ ಹೋಗಿದ್ದಾಗ, ಆರೋಪಿತರು, ಸಂಸಾರದ ವಿಚಾರದಲಿಪ್ಲಿ ಹಾಗೂ ವರದಕ್ಷಿಣೆ ಹೆಚ್ಚಾಗಿ ತರಲಿಲ್ಲವೆಂದು ಪದೇ ಪದೇ ಬೈದು ಹೊಡೆದು ಕಿರುಕುಳ ನೀಡುತ್ತಿದ್ದಾರೆ, ಅಪ್ಪ ಮತ್ತು ಮಗ ಬಂದು ಬುದ್ದಿವಾದ ಹೇಳಿದರೂ ಸಹ ತನಗೆ ಕಿರಕುಳ ನೀಡುತ್ತಿದ್ದಾರೆಂದು, ಎಷ್ಟು ಸಹಿಸಿಕೊಂಡು ಹೋದರೂ ಸಹ ಕಿರುಕುಳ ನೀಡುತ್ತೇ ಇದ್ದು ನೀನು ನಿಮ್ಮಪ್ಪನ ಮನೆಯಿಂದ ಹಣವನ್ನು ತರದೇ ಇದ್ದರೆ ನೀನು ಬದುಕಿರುವ ಬದಲು ಸಾಯುವುದೇ ಲೇಸು, ನೀನು ಸತ್ತು ಹೋಗು ಎಂದು ಹೇಳುತ್ತಿದ್ದರೆಂದು ನನ್ನ ಹೆಂಡತಿ ಬಳಿ ಹೇಳಿ ಕಳುಹಿಸಿದರೆಂದು ಶೇಖರ್ ನನಗೆ ಹೇಳಿದರು ಎಂದರೆ ಸರಿಯಲ್ಲ.

7. 04.10.2020 ರಂದು ಬೆಳಗ್ಗೆ ಮಧುಮಾಲಿನಿಯ ಮನೆಯಲ್ಲಿ ಜೋರಾಗಿ ಜಗಳ ನಡೆಯುತ್ತಿದ್ದು, ಜಗಳದ ಸದ್ದು ಹೊರಗಡೆ ನಡೆಯುತ್ತಿದ್ದು ಅದೇ ದಿನ ಬೆಳಗ್ಗೆ 10.45 ರಿಂದ 11 ಗಂಟೆ ಸಮಯದಲ್ಲಿ ಮಧುಮಾಲಿನಿ, ಮನೆಯ ಮುಂದೆ ಬಟ್ಟೆ ತೊಳೆಯುತ್ತಿದ್ದಳೆಂದು, ಸ್ವಲ್ಪ ಹೊತ್ತಿನಲ್ಲೆ ಆಕೆಯ ಗಂಡ 1 ನೇ ಆರೋಪಿ, ಮಧುಮಾಲಿನಿ ನೇಣು ಹಾಕಿಕೊಂಡಿದ್ದಾಳೆ ಎಂದು ಜೋರಾಗಿ ಕೂಗಿಕೊಂಡಾಗ, ತಾನು ಮತುತ ಇತರರು ಹೋಗಿ ನೋಡಿದೆವೆಂದು, ಮಧುಮಾಲಿನಿಯು ನೇಣು ಬಿಗಿದುಕೊಂಡಿದ್ದಳೆಂದು, ಮಲ್ಲಿಕರವರು ತಿಳಿಸಿದರು ಎಂದು ಶೇಖರ್ ನನಗೆ ಹೇಳಿದರು ಎಂದರೆ ನನಗೆ ಗೊತ್ತಿಲ್ಲ. ಮಧುಮಾಲಿನಿ, ಆತ್ಮಹತ್ಯೆ ಮಾಡಿಕೊಳ್ಳಲು ಆರೋಪಿತರೇ ಕಾರಣವೆಂದು ಮಲ್ಲಿಕಾರವರು ತಿಳಿಸಿದರು ಎಂದು ಶೇಖರ್ ನನಗೆ ಹೇಳಿದರು ಎಂದರೆ ನನಗೆ ಗೊತ್ತಿಲ್ಲ.

8. ಈ ದಿನ ಪೊಲೀಸರು ನನ್ನನ್ನು ಸಾಕ್ಷಿ ವಿಚಾರಣೆಗೆ ಎಂದು ಬಸ್ಸಿನಲ್ಲಿ ಕರೆತಂದಿರುತ್ತಾರೆ. ಆರೋಪಿತರೂ ಹಾಗೂ ನಾನು ಈಗಲೂ ಒಂದೇ ಊರಿನಲ್ಲಿ ವಾಸಿಸುತ್ತಿದ್ದೇವೆ ಎಂದರೆ ಸರಿ. ಆರೋಪಿತರ ನಿರಂತರ ಕಿರುಕುಳ ಕಾರಣದಿಂದ ಮಧುಮಾಲಿನಿಯು, ಆತ್ಮಹತ್ಯೆ ಮಾಡಿಕೊಂಡಿದ್ದ ರೂ ಸಹ ಆರೋಪಿತರು ನಮ್ಮ ಊರಿನವರಾಗಿರುವುದರಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

9. ದಿಃ 06.10.2020 ರಂದು ಪೊಲೀಸರು ನನ್ನನ್ನು ವಿಚಾರಣೆ ಮಾಡಿದಾಗ, ವಿವರವಾದ ಹೇಳಿಕೆಯನ್ನು ಸಹ ನಾನು ನೀಡಿದ್ದೆನು ಎಂದರೆ ಸರಿಯಲ್ಲ. ಸಾಕ್ಷಿಗೆ ಹೇಳಿಕೆಯ '' ಕಳೆದ 8 ವರುಷಗಳ ಹಿಂದೆ ............................................................ ನಿತೀಶ್ ಕುಮಾರ್ ಮತ್ತು ಆತನ ತಂದೆ ಹೊನ್ನಯ್ಯನವರೇ ಕಾರಣರಾಗಿರುತ್ತಾರೆ '' ಎಂಬ ಭಾಗವನ್ನು ಸರ್ಕಾರಿ ಅಭಿಯೋಜಕರು ಓದಿ ಹೇಳಿದ್ದು, ಸದರಿ ಹೇಳಿಕೆಯನ್ನು ಸಾಕ್ಷಿಯು ಅಲ್ಲಗೆಳೆದಿರುವುದರಿಂದ, ಸದರಿ ಹೇಳಿಕೆಯ ಭಾಗವನ್ನು ನಿಪಿ.18 ಎಂದು ಗುರುಸಲಾಯಿತು. ಎಲ್ಲ ವಿಚಾರ ಗೊತ್ತಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರವಾಗಿ ಶ್ರೀ ಎಂ ಎಂ ವಕೀಲರಿಂದಃ**

1 ಮತ್ತು 2 ಆರೋಪಿತರ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ. ಆದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರು ವಿಚಾರಣೆ ಃ** ಇರುವುದಿಲ್ಲ.

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಶಿವಪ್ರಸಾದ್ ಕೆ.ಬಿ.)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.